JUNE 09, 2025

**AKASHAVANI - DHARWAD**

**PRADESH SAMACHARA (KANNADA) 12.00 P.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಜಾಗತಿಕ ಕಲ್ಯಾಣ, ವಿಶ್ವ ಶಾಂತಿ ಮತ್ತು ಆಧ್ಯಾತ್ಮಿಕ ಅನುಭೂತಿಗಾಗಿ,** ಇಡೀ ವಿಶ್ವವೇ ಇಂದು, ಭಾರತದತ್ತ ನೋಡುತ್ತಿದೆ ಎಂದು, ರಾಜ್ಯಪಾಲ ಥಾವರಚಂದ ಗೆಹಲೋಟ್ ಹೇಳಿದ್ದಾರೆ.  ಬೆಳಗಾವಿ ಜಿಲ್ಲೆ, ಕಾಗವಾಡ ತಾಲೂಕು ಐನಾಪುರದಲ್ಲಿ, "ಅಖಿಲ ಭಾರತ ಭಟ್ಟಾರಕ ಸಮ್ಮೇಳನ ಹಾಗೂ ಜೈನ ಸಮಾವೇಶ"ಕ್ಕೆ ಚಾಲನೆ ನೀಡಿ, ಮಾತನಾಡಿದರು. ಭಗವಾನ್ ಮಹಾವೀರರ ಜೀವನ ತತ್ವ ಮತ್ತು ಬೋಧನೆಗಳನ್ನು ಅಳವಡಿಸಿಕೊಂಡು, ಸತ್ಸಂಗದ ಮೂಲಕ, ಶಾಂತಿ, ಸಾಮರಸ್ಯ, ಸಹಾನುಭೂತಿಯ ವಾತಾವರಣ, ನಿರ್ಮಿಸುವಂತಾಗಬೇಕು, ಎಂದರು. ಆಚಾರ್ಯ ಶ್ರೀ ಗುಣಧರ ನಂದಿ ಮಹಾರಾಜರು, ಸಾನಿಧ್ಯ ವಹಿಸಿದ್ದರು.

<><><>

**ಕಲಬುರಗಿಯಲ್ಲಿ, ಸೇನಾ ಆಯ್ಕೆ ಪೂರ್ವ ತರಬೇತಿ** ಶಾಲೆಯನ್ನು ಪ್ರಾರಂಭಿಸಿ, ಹಿಂದುಳಿದ ವರ್ಗಗಳ ಯುವ ಜನರಿಗೆ, ಸೇನೆ ಸೇರಲು, ನೆರವು ಹಾಗೂ ಮಾರ್ಗದರ್ಶನದ ವ್ಯವಸ್ಥೆ ಮಾಡಲಾಗಿದೆ ಎಂದು, ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ. ತರಬೇತಿ ಶಾಲೆಯ, ಎರಡನೇ ತಂಡದ ತರಬೇತಿಗೆ ಚಾಲನೆ ನೀಡಿ, ಅವರು ಮಾತನಾಡಿದರು. ನೌಕಾ ಸೇನೆ, ಭೂ ಸೇನೆ, ವಾಯು ಸೇನೆ, BSF, CRPF, SSB, NIA, SSF, ITBP ಸೇವೆಗಳಿಗೆ ಸೇರಲು, ಈ ಉಚಿತ ತರಬೇತಿ ಅನುಕೂಲ ಕಲ್ಪಿಸಲಿದೆ. ಪ್ರತಿ ತಂಡದಲ್ಲಿ 100 ಜನರ, ತರಬೇತಿಗೆ ಅವಕಾಶ ಕಲ್ಪಿಸಲಾಗಿದೆ, ಎಂದರು.

<><><>

**ಬೆಳಗಾವಿ ಜಿಲ್ಲೆ, ಯಳ್ಳೂರು ಗ್ರಾಮದಲ್ಲಿ** ವಿಕಸಿತ ಕೃಷಿ ಸಂಕಲ್ಪ ಅಭಿಯಾನದಡಿ, ರೈತರಿಗೆ ಮುಂಗಾರು ಬೆಳೆಗಳ ನಿರ್ವಹಣೆ, ಬೀಜೋಪಚಾರ, ಸಂಯುಕ್ತ ರಸಗೊಬ್ಬರ ಬಳಕೆ ಕುರಿತು ಕೃಷಿ ವಿಜ್ಞಾನಿಗಳು ಮಾಹಿತಿ ನೀಡಿದರು.  ಮತ್ತಿಕೊಪ್ಪ ಕೃಷಿ ಸಂಶೋಧನಾ ಸಂಸ್ಥೆಯ ಕೃಷಿ ವಿಜ್ಞಾನಿಗಳು, ಕೃಷಿ ಇಲಾಖೆ ಅಧಿಕಾರಿಗಳು ಯಳ್ಳೂರು ಗ್ರಾಮದಲ್ಲಿ ಜರುಗಿದ ಅಭಿಯಾನದಲ್ಲಿ ಪಾಲ್ಗೊಂಡಿದ್ದರು. ಭಾಸುಮತಿ ಅಕ್ಕಿಗೆ ಪ್ರಸಿದ್ಧಿ ಪಡೆದ ಯಳ್ಳೂರು ಗ್ರಾಮದ ರೈತ ಮಹಿಳೆ, ವಿಜಯಲಕ್ಷ್ಮೀ ಪೋತದಾರ, ಕೃಷಿ ಅಭಿಯಾನದ ಮೂಲಕ ತಮಗೆ ಉಪಯುಕ್ತ ಮಾಹಿತಿ ಪಡೆಯಲು ಸಾಧ್ಯವಾಗಿದೆ ಎಂದು ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ.

<><><>

**ಪರಿಶಿಷ್ಟ ಜಾತಿ ಗಣತಿಯಲ್ಲಿ,** ಇದು ವರೆಗೆ ಭಾಗವಹಿಸದೇ ಇರುವ, ಪರಿಶಿಷ್ಟ ಸಮುದಾಯದವರು, ಈ ತಿಂಗಳ 22ರ ವರೆಗೆ, ರಾಜ್ಯದ 9 ಸಾವಿರದ 400 ನಾಗರಿಕ ಸೇವಾ ಕೇಂದ್ರಗಳಾದ, ಕರ್ನಾಟಕ ಒನ್‌ನಲ್ಲಿ, ತಮ್ಮ ಮಾಹಿತಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್‌ದಾಸ್ ಏಕ ಸದಸ್ಯ ಆಯೋಗದ ನಿರ್ದೇಶನದಂತೆ, ಆಧಾರ್ ಕಾರ್ಡ್ ಅಥವಾ ಪಡಿತರ ಚೀಟಿ ಬಳಸಿ, ಮಾಹಿತಿ ದಾಖಲಿಸಬಹುದು.

<><><>

**ಇದೇ 12 ರಂದು, ವಿಶ್ವ ಬಾಲ ಕಾರ್ಮಿಕ** ಪದ್ಧತಿ ವಿರೋಧಿ ದಿನಾಚರಣೆ ಹಿನ್ನೆಲೆ, ಯಾದಗಿರಿ ಜಿಲ್ಲೆ, ಅಪರ ಜಿಲ್ಲಾಧಿಕಾರಿ ಶರಣಬಸಪ್ಪ ಕೋಟೆಪ್ಪಗೋಳ, ಪೂರ್ವಭಾವಿ ಸಭೆ ನಡೆಸಿದರು.

<><><>

**ರಾಯಚೂರು ನಗರದ ಈಶ್ವರ** ದೇವಸ್ಥಾನದಲ್ಲಿ, ಮುನ್ನೂರು ಕಾಪು ಸಮಾಜದ ಮುಂಗಾರು ಸಾಂಸ್ಕೃತಿಕ ಹಬ್ಬಕ್ಕೆ, ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಖಾತೆ ಸಚಿವ ಎನ್.ಎಸ್ ಬೋಸರಾಜು ಚಾಲನೆ ನೀಡಿದರು. ಸಾಂಸ್ಕೃತಿಕ ಉತ್ಸವವು ಈ ಬಾರಿ 25 ವರ್ಷಗಳನ್ನು ಪೂರೈಸುತ್ತಿದ್ದು, ಜನಪ್ರಿಯತೆಗೆ ಪಾತ್ರವಾದ ಮುಂಗಾರು ಹಬ್ಬಕ್ಕೆ ರಾಜ್ಯ ಹಾಗೂ ಹೊರರಾಜ್ಯಗಳ ವಿವಿಧ ಕಲಾತಂಡಗಳು ಪಾಲ್ಗೊಳ್ಳುತ್ತಿರುವುದು ಹೆಮ್ಮೆಯ ವಿಷಯವಾಗಿದೆ ಎಂದರು.

<><><>

**ಬಾಗಲಕೋಟೆ ಜಿಲ್ಲೆ, ಶಾಲಾ ಮಕ್ಕಳಿಗೆ** ಆಯೋಜಿಸಲಾಗಿದ್ದ, ಕರ್ನಾಟಕ ಪ್ರವಾಸ ದರ್ಶನದ ಕುರಿತು ಭಾಷಣ ಸ್ಪರ್ಧೆಯಲ್ಲಿ ವಿಜೇತರಾದ ನವನಗರದ ಸರ್ಕಾರಿ ಆದರ್ಶ ವಿದ್ಯಾಲಯದ ವಿದ್ಯಾರ್ಥಿ ಪೃಥ್ವಿ ಕುಂಬಾಳಿವತಿ, ಶ್ರದ್ಧಾ ಹಳ್ಳೂರ, ಕದಾಂಪೂರ ಆರ್.ಸಿ ಶಾಲೆಯ ಭಾಗ್ಯಶ್ರೀ ಇಂಗಳಗಿ ಹಾಗೂ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ 625 ರಲ್ಲಿ 624 ಅಂಕ ಗಳಿಸಿದ, ಬೀಳಗಿ ಆದರ್ಶ ವಿದ್ಯಾಲಯದ ಷಫಾ ನಿಂಬಾಳ್ಕರ ಅವರನ್ನು ಜಿಲ್ಲಾಧಿಕಾರಿ, ಜಾನಕಿ ಕೆ.ಎಂ ಅವರು ಸನ್ಮಾನಿಸಿ, ಗೌರವಿಸಿದರು.

<><><>

**ಪದಗಳ ತರ್ಜುಮೆಗಿಂತ,** ಭಾವಾನುವಾದ ಪ್ರಕಾರ, ಅನುವಾದ  ಸಾಹಿತ್ಯದಲ್ಲಿ ಮಹತ್ವದ್ದಾಗಿದೆ ಎಂದು, ಮಡಿಕೇರಿಯ ಲೇಖಕಿ ದೀಪಾ ಭಾಸ್ತಿ ಅಭಿಪ್ರಾಯಪಟ್ಟಿದ್ದಾರೆ. ಕೊಡಗು ಪತ್ರಕರ್ತರ ಸಂಘ, ಮಡಿಕೇರಿಯಲ್ಲಿ ಆಯೋಜಿಸಿದ್ದ, ಅಭಿನಂದನಾ ಸಮಾರಂಭದಲ್ಲಿ ಪಾಲ್ಗೊಂಡು, ಅವರು ಮಾತನಾಡಿದರು. ಬಾನು ಮು  ತ್ತಾಕ್ ಅವರ, 'ಎದೆಯ ಹಣತೆ' ಕೃತಿ ಸೇರಿದಂತೆ, 6 ಕಥಾ ಸಂಕಲನಗಳ 12 ಕಥೆಗಳನ್ನು ಆಯ್ಕೆ ಮಾಡಿ, ಆಂಗ್ಲ ಭಾಷೆಗೆ, ಭಾವಾನುವಾದ ಮಾಡಿ, ಹಾರ್ಟ್ ಲ್ಯಾಂಪ್ ಶೀರ್ಷಿಕೆ ಅಡಿ, ಪ್ರಕಟಿಸಲಾಯಿತು. ಬೂಕರ್ ಪ್ರಶಸ್ತಿ ಬಂದ ಬಳಿಕ, 70 ಸಾವಿರ ಪ್ರತಿಗಳು ಮುದ್ರಿತವಾಗಿವೆ ಎಂದರು.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.**

<><><>